ಮೈಸೂರ ಗೆಜೆಟ್.

ನಂ. 10] ಸರ್ಕಾರದಿಂದ ಫಾಯಿಷ್ ಆದ್ದು. [1895.

ಬೆಂಗಳೂರು, ಗುರುವಾರ, ಮಾರ್ಚಿ ತಾ|| 21, ಸನ 1895.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಜೋಡ್ರ್ ಪ್ರೆಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜ್‌ರು, ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೋಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ, ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮುಂಜೂರ್ಮಾಡಲ್ಪಟ್ಟ ಆಕ್ಟ್‌ಗಳು ವ ರೆಗ್ಯುಲೇಷನ್‌ಗಳು.—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

ಸೂಚನೆ—ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ನಂಬರ್ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ತಾರೀಖು 4ನೇ ಮಾರ್ಚಿ 1895.

ನಂ. 13610.—ಜೆ. 3089.—ಶಿವಮೊಗ್ಗಾ ಸಿವಿಲ್ ಸರ್ಜಿಯರಾದ ಮೆಸ್ಟರ್ ಪಿ. ಎಸ್. ಅಚ್ಯುತರಾವ್, ಎಲ್. ಎಂ. ಎಸ್. ಯವರು, ಹಂಗಾಮಿ ತರೀಕ್ ಸ್ಪೆಷಲ್ ಡ್ಯೂಟಿಯ ಮೇಲೆ ಬೆಂಗಳೂರಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ.

2. ಬೆಂಗಳೂರು ಅಸಿಸ್ಟೆಂಟ್ ಸರ್ಜಿಯರ್ ಮೆಸ್ಟರ್ ಬಿ. ಡಿ. ರಾಘವೇಂದ್ರರಾವ್, ಎಲ್. ಎಂ. ಎಸ್. ಯವರು, ಮೆಸ್ಟರ್ ಪಿ. ಎಸ್. ಅಚ್ಯುತರಾಯರವರು ಸ್ಪೆಷಲ್ ಡ್ಯೂಟಿಯಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಶಿವಮೊಗ್ಗಾ ಸಿವಿಲ್ ಸರ್ಜಿಯರಾಗಿ ಆಕ್ಟಿಂಗ್ ತರೀಕ್ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 8ನೇ ಮಾರ್ಚಿ 1895.

ನಂ. 14216.—ಜೆ. 831.—ಸನ 1877ನೇ ಇಸವಿಯ IIIನೇ ನಂಬರ್ ರಿಜಿಸ್ಟ್ರೇಷನ್ ಆಕ್ಟ್ 6ನೇ ಸೆಕ್ಷನಿನ ನಿಯಮಗಳನ್ನನುಸರಿಸಿ, ಮೈಸೂರ್ ಗವರ್ನಮೆಂಟಿನವರು, ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರ ಆಫಿಸ್ ಪೆಡಿಕ್ಕರ್ಕ ಟಿ. ಕೆ. ಲಕ್ಷ್ಮಣ

ಅಯ್ಯರ್, ಬಿ. ಎ. ಇವರನ್ನು ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರ ಆಫಿಸಿನಲ್ಲಿ ತನ್ನ ಕೆಲಸಕ್ಕೆ ವಾಪಸ್ ಬಂದ ಜಿ. ಗುಂಡಪ್ಪನವರಿಗೆ ಬದಲು, ಆರುತಿಂಗಳ ಕಾಲ ಆಜಮಾಯಿಷಿ ತರೀಕ್ ಎಡತೊರೆ ಫಸ್ಟ್ ಗ್ರೇಡ್ ಸಬ್ ರಿಜಿಸ್ಟ್ರಾರ್‌ರಾಗಿ ಮೊಕರರ್ ಮಾಡಿರುತ್ತಾರೆ.

ತಾರೀಖು 11ನೇ ಮಾರ್ಚಿ 1895.

ನಂ. 14250.—ಜಿ. 3181.—ಮೃತ್ಯಾಪಹಾರಾದಿಗಳಂ ಕೋಧಿಸುವದಕ್ಕಾಗಿ ಏರ್ಪಡಿಸಲ್ಪಟ್ಟಿರುವ ಇಲಾಖೆಯಲ್ಲಿ ಕೆಲಸ ಕಲಿತುಕೊಳ್ಳುವದಕ್ಕಾಗಿ, ಅವರ ಪರೀಕ್ಷೆಯ ಬಗ್ಗೆ ಏರ್ಪಾಡಾದ ಸಂಘಟದವರ ಶಿಫಾರಸ್ಸಿನ ಮೇಲೆ ಇದರಡಿ ತಿಳಿಸಲ್ಪಡುವ ಉಮೇದ್‌ವಾರರು ಗವರ್ನಮೆಂಟಿನವರಿಂದ ಚುನಾಯಿಸಲ್ಪಟ್ಟು, 1894ನೇ ಇಸವಿ ಜುಲೈ 18ನೇ ಮಾರ್ಕ್ಯಂ 1020.—ಜಿ. 218ನೇ ನಂಬರ್ ಇಸ್ತಿಹಾರ್‌ನಾಮೆಯ ಮೂಲಕ ವಿಧಿಸಲ್ಪಟ್ಟಿರುವ ಪರತ್ತುಗಳಿಗೊಳಪಟ್ಟು ಮೃತ್ಯಾಪಹಾರಾದಿಗಳ ಅಸ್ಸೆಟಿಸ್ ಕೋಧಕರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ:—

ಹೆಸರು.

ರಿಜಸ್ಟರ್ ನಂಬರ್	29	ಮೆಸ್ಟರ್ ವಿ. ಎಸ್. ಸಾಂಬಶಿವ ಅಯ್ಯರ್.
ಡಿಟೋ	32	,, ಎ. ಟಿ. ಸೇಟ್ಲೂರ್.
ಡಿಟೋ	33	,, ಬಿ. ಶಾಮಣ್ಣ.
ಡಿಟೋ	14	,, ಎಚ್. ಸಿ. ಕೃಷ್ಣಯ್ಯ.
ಡಿಟೋ	43	,, ಬಿ. ವೆಂಕಟರಾವ್.
ಡಿಟೋ	11	,, ಬಿ. ಜಯರಾಂ.

ನಂ. 14284.—ಜಿ. 3194.—ಮೈಸೂರ್ ಸರ್ವಿಸ್ ರೆಗ್ಯುಲೇಷಗಳ 172ನೇ ಆರ್ಟಿಕಲ್ ಅನುಸರಿಸಿ, ಕೃಷ್ಣರಾಜಪೇಟೆ ತಾಲ್ಲೂಕು ಅಮಲ್ದಾರ್ ವೆಂಕಟರಾಯರು, 1895ನೇ ಇಸವಿ ಮಾರ್ಚಿ 14ನೇ ತಾರೀಖು ಮೊದಲು ಯಂಟು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ. 14286.—ಜಿ. 3191.—ಹಾಸನ ಡೆಪ್ಯುಟಿ ಕಮ್ಮಿಷನರ್ ಮೆಸ್ಟರ್ ಟಿ. ಎಸ್. ಪೂರ್ಣಯ್ಯನವರಿಗೆ, 1895ನೇ ಇಸವಿ ಫಿಬ್ರವರಿ 2ನೇ ಮಾರ್ಕ್ಯಂ 62ನೇ ಡಿ. ಎಚ್. ಬ. ಇಸ್ತಿಹಾರ್‌ನಾಮೆಯ ಮೂಲಕ ಕೊಡಲ್ಪಟ್ಟಿರುವ 27 ದಿನಗಳ ಪ್ರಿವಿಲೀಜ್ ರಜಾ ನಾಲ್ಕು ದಿನಗಳಿಗೆ ಜಾಸ್ತೀ ಮಾಡಲ್ಪಟ್ಟಿದೆ.

ನಂ. 14287.—ಜಿ. 3192.—ಅಮಲ್ದಾರ್ ಬಿ. ಸೀತಾರಾಮಯ್ಯನವರು, 1894ನೇ ಇಸವಿ ಜೂನ್ 4ನೇ ತಾರೀಖುಳ್ಳ 21022.—ಜಿ. ಎಫ್. 60–93. ಮತ್ತು 94ನೇ ಇಸವಿ ಡಿಸೆಂಬರ್ 11ನೇ ಮಾರ್ಕ್ಯಮುಳ್ಳ 9547.–ಜಿ. ಎಫ್. 60–93ನೇ ನಂಬರ್ ಇಸ್ತಿಹಾರ್‌ನಾಮೆಗಳ ಮೂಲಕ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಕೊಡಲ್ಪಟ್ಟ ರಜಾದಿಂದ ಕೆಲಸಕ್ಕೆ ವಾಪಸ್ ಬಂದರಾಗಿ, ಮೃತಪಟ್ಟ ವೈ. ನರಸಿಹ್ಮಯ್ಯನವರಿಗೆ ಬದಲಾಗಿ ತಿಪಟೂರು ತಾಲ್ಲೂಕು ಅಮಲ್ದಾರರಾಗಿ ಕಳುಹಿಸಲ್ಪಟ್ಟಿರುತ್ತಾರೆ.

ನಂ. 14386.—ಜಿ. 3211.—ಮೈಸೂರ್ ಸರ್ವಿಸ್ ರೆಗ್ಯುಲೇಷಗಳ 172ನೇ ಆರ್ಟಿಕಲ್ ಅನುಸರಿಸಿ, ಶಿವಮೊಗ್ಗಾ ಡಿಸ್ಟ್ರಿಕ್ಟ್ ಟ್ರೆಜರಿ ಅಸಿಸ್ಟೆಂಟ್ ಕಮ್ಮಿಷನರಾದ ಮೆಸ್ಟರ್ ಎಂ. ರಾಮಚಂದ್ರರಾಯರವರು, 95ನೇ ಇಸವಿ ಮಾರ್ಚಿ 5ನೇ ತಾರೀಖು ಮೊದಲ್ ಆರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

2. ಶಿವಮೊಗ್ಗಾ ಡಿಸ್ಟ್ರಿಕ್ಟ್ 2ನೇ ಅಸಿಸ್ಟೆಂಟ್ ಕಮ್ಮಿಷನರಾದ ಮೆಸ್ಟರ್ ಎಂ. ಕೃಷ್ಣಯ್ಯಂಗಾರ್ರವರು, ಮೆಸ್ಟರ್ ಎಂ. ರಾಮಚಂದ್ರರಾಯರವರು ರಜಾಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಡಿಸ್ಟ್ರಿಕ್ಟ್ ಟ್ರೆಜರಿ ಚಾರ್ಜ್‌ನ್ನು ಹಂಗಾಮಿಯಾ ತರೀಕ್ ವಹಿಸಿರುತ್ತಾರೆ.

ನಂ. 14388.—ಜಿ. 3213.—ಮೈಸೂರ್ ಸರ್ವಿಸ್ ರೆಗ್ಯುಲೇಷಗಳ 188ನೇ ಆರ್ಟಿಕಲ್ ಅನುಸರಿಸಿ, ಯಡೆಹಳ್ಳಿ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ ಎಲ್ಲೂ ಶ್ರೀನಿವಾಸರಾಯರವರು, 95ನೇ ಇಸವಿ ಮಾರ್ಚಿ 5ನೇ ತಾರೀಖು ಮೊದಲು ಅಥವಾ ಅವರದನ್ನುಪಯೋಗಿಸಿಕೊಳ್ಳಬಹುದಾದ ತಾರೀಖು ಮೊದಲು, ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

2. ಕಡೂರು ಡಿಸ್ಟ್ರಿಕ್ಟ್ ಆಫಿಸ್ ಹೆಡ್ ಅಕೌಂಟೆಂಟರಾದ ಎಚ್. ಕೇಶವಾಚಾರ್ರು, ಎಲ್ಲೂ ಶ್ರೀನಿವಾಸರಾಯರು ರಜಾಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಎಡೆಹಳ್ಳಿ ಡೆಪ್ಯುಟಿ ಅಮಲ್ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 14446.—ಜಿ. 842.—ಸ್ ಸ 1877ನೇ ಇಸವಿ IIIನೇ ನಂಬರ್ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟಿನ 6ನೇ ಸೆಕ್ಷನ್ ನಿಯಮಗಳನ್ನನುಸರಿಸಿ, ಮೈಸೂರ್ ಗವರ್ನಮೆಂಟಿನವರು ಡಿಸ್ಟ್ರಿಕ್ಟ್ ಜಾತ ವಿಶಿಷ್ಟ ಡೆಪ್ಯುಟಿ ಕಮ್ಮಿಷನರ್‌ಗಳನ್ನೂ ಅವರವರ ಡಿಸ್ಟ್ರಿಕ್ಟಿನ ಎಕ್ಸ್ ಆಫಿಷಿಯೋ ರಿಜಿಸ್ಟ್ರಾರ್‌ಗಳಾಗಿ ಮೊಕರರ್ ಮಾಡಿರುತ್ತಾರೆ.

2. ಈ ಏರ್ಪಾಡಿನಿಂದ 475ನೇ ನಂಬರ್ ಇಸ್ತಿಹಾರ್, ತತ್ಕಾಲದಲ್ಲಿ ಡಿಸ್ಟ್ರಿಕ್ಟ್ ಟ್ರೆಜರಿ ಇನ್‌ಚಾರ್ಜಿನಲ್ಲಿದ್ದ ವಿಶಿಷ್ಟ ಅಸಿಸ್ಟೆಂಟ್ ಕಮ್ಮಿಷನರ್‌ಗಳನ್ನೂ, ಡೆಪ್ಯುಟಿ ಕಮ್ಮಿಷನರ್‌ಗಳಿಗೆ ಬದಲಾಗಿ, ಅಂಥಾ ಡಿಸ್ಟ್ರಿಕ್ಟ್ ಎಕ್ಸ್ ಆಫಿಷಿಯೋ ರಿಜಿಸ್ಟ್ರಾರ್‌ಗಳಾಗಿ ಮೊಕರರ್ ಮಾಡಿ, 1892ನೇ ಇಸವಿ ಮಾರ್ಚಿ 14ನೇ ತಾರೀಖಿನಲ್ಲಿ ಕೊಡಲ್ಪಟ್ಟ 477ನೇ ನಂಬರ್ ಇಸ್ತಿಹಾರ್‌ನಾಮೆಯ ಪೈಕಿ ಅದಕ್ಕೆ ಸಂಬಂಧಪಟ್ಟ ಭಾಗವು ರದ್ದು ಮಾಡಲ್ಪಟ್ಟಿವೆ.